ಓ.ಎಸ್. ನಂ. 55/2018

ಪಿ.ಡಬ್ಲ್ಯು: 01

ದಿನಾಂಕಃ 21.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ 2 ನೇ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ನನ್ನ ಹಾಗೂ 1 ನೇ ಪ್ರತಿವಾದಿಯವರ ಮಧ್ಯ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ. ನನ್ನ ಹಾಗೂ 1 ನೇ ಪ್ರತಿವಾದಿಯ ನಡುವೆ ದಿಃ 02.02.2015 ರಂದು ಮಾರಾಟದ ಬಗ್ಗೆ ಮಾತುಕತೆ ನಡೆದಿರುತ್ತದೆ. ನನ್ನ ಬಳಿ ನೊಂದಣಿ ಮಾಡಿಸಿಕೊಳ್ಳಲು ಹಣ ಇಲ್ಲದ ಕಾರಣ ಅದೇ ದಿನ ಕ್ರಯ ಪತ್ರ ಬರೆಸಿಕೊಂಡಿರುವುದಿಲ್ಲ. ಪತ್ರ ಬರೆಯುವಾಗ ನಾನು 3 ವರ್ಷ ಸಮಯವನ್ನು ತೆಗೆದುಕೊಂಡಿರುತ್ತೇನೆ. 1 ವಾರ ಕಳೆದ ನಂತರ ನಾನು 1 ನೇ ಪ್ರತಿವಾದಿಯನ್ನು ಕೇಳಿರುತ್ತೇನೆ. ಆದರೆ ಅವರು ಇಂದು ನಾಳೆ ಎಂದು ಹೇಳುತ್ತಲೇ ಬಂದರು. ನಾನು ಈ ರೀತಿ 10-12 ಬಾರಿ ಕೇಳಿರುತ್ತೇನೆ. ಅವರು ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಲೇ ಬಂದರು. ಆ ಸಮಯದಲ್ಲಿ ನಾನು ನೋಟಿಸ್ ನೀಡಿರುವುದಿಲ್ಲ. ನನ್ನ ಪ್ರಕಾರ ದಿಃ 02.02.2018 ರ ಒಳಗೆ ಕ್ರಯ ಪತ್ರವನ್ನು ಮಾಡಿಸಿಕೊಡಬೇಕಾಗಿದೆ. ಆ ಸಮಯದ ಒಳಗೆ ನಾನು ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ನೋಟಿಸನ್ನು ಕಳುಹಿಸಿರುತ್ತೇನೆ. ನೋಟಿಸನ್ನು ಹೊರತುಪಡಿಸಿ ಬೇರೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಾನು ನೋಟಿಸು ಕಳುಹಿಸಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯವರಿಗೆ ನೊಂದಾಯಿತ ಕ್ರಯ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. 2017 ನೇ ಇಸವಿಯಲ್ಲಿ ಈ ವ್ಯವಹಾರದ ಬಗ್ಗೆ ನನಗೆ ಪಹಣಿ ತೆಗೆಸಿದಾಗ ತಿಳಿದಿರುತ್ತದೆ. ಆ ಸಮಯದಲ್ಲಿ ಪಹಣಿ 2 ನೇ ಪ್ರತಿವಾದಿಯ ಹೆಸರಿಗೆ ಇತ್ತು. ಈ ವಿಚಾರ ನನಗೆ ಗೊತ್ತಾದ ನಂತರ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಸದರಿ ಕ್ರಯ ಪತ್ರದ ನಂತರ ದಾವಾ ಸ್ವತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಅದು 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ. 2 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯ ಪತ್ರದ ದಿನಾಂಕದಿಂದ ನನಗೆ ಸದರಿ ಕ್ರಯ ಪತ್ರದ ಬಗ್ಗೆ ಗೊತ್ತು ಎಂದರೆ ಇಲ್ಲ. ಇವತ್ತಿಗೂ ಸದರಿ ಆಸ್ತಿ 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಅಲ್ಲ. ದಾವಾ ಆಸ್ತಿ ಕಣ ಆಗಿರುತ್ತದೆ. ದಾವಾ ಆಸ್ತಿಯ ಸ್ವಾಧೀನ 2 ನೇ ಪ್ರತಿವಾದಿಯ ಬಳಿ ಇರುತ್ತದೆ ಎಂದರೆ ತಪ್ಪು ಅದನ್ನು 1 ನೇ

ಪ್ರತಿವಾದಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.